# ಆಹಾ ಸುದ್ದಿ!

★ ಸಸಿತೋಟ



ಭಾರತದ ಸಾರ್ವಜನಿಕ ಮೂತ್ರಾಲಯಗಳ ಗೋಡೆಗಳ ಮೇಲೆ 'ಫ್ರೀ ಹ್ಯಾಂಡ್' ಸ್ಥಿರ ಚಿತ್ರಗಳಿದ್ದರೆ, ಅಮೆರಿಕಾದ ಪೆನ್ಸಿಲ್ವೇನಿಯಾದ ಕೋಕಾ-ಕೋಲಾ ಪಾರ್ಕ್‌ನಲ್ಲಿ ಮೂತ್ರಾಲಯದ ಗೋಡೆಗೆ 'ಹ್ಯಾಂಡ್ಸ್ ಫ್ರೀ' ವಿಡಿಯೋ ಗೇಮ್ ಅಳವಡಿಸಲಾಗಿದೆಯಂತೆ. ಮೂತ್ರ ವಿಸರ್ಜಿಸುವಾಗ ವಿಡಿಯೋ ಗೇಮ್ ಅನ್ನು ಹೇಗೆ ಆಡುವುದು? ದೇಹವನ್ನು ಎಡ-ಬಲ ಅಲ್ಲಾಡಿಸಿದರೆ ಸಾಕಂತೆ, ವಿಡಿಯೋ ಗೇಮ್‌ಗೆ ನಿರ್ದೇಶನ ನೀಡಬಹುದಂತೆ. ಆದರೆ ಎಡ ಬಲಕ್ಕೆ ಅಲ್ಲಾಡಿಸುವಾಗ ಗೋಡೆಯ ಅಕ್ಕಪಕ್ಕವೂ ವಿಡಿಯೋ ಬದಲು ವಾಟರ್ ಕಲರ್ ಚಿತ್ರಗಳು ಮೂಡಿದರೆ..!

ಇತ್ತೀಚೆಗೆ ಹೋಳಿ ಹಬ್ಬದಲ್ಲಿ ದೇಶದ ಜನ ರಂಗಿನಲ್ಲಿ ಮಿಂದೆದ್ದರು. ಪಂಜಾಬ್‌ನ ಸುವರ್ಣ ಮಂದಿರದಲ್ಲಿ ನಡೆದ 'ಹೋಲಾ ಮೊಹಲ್ಲಾ' ಹಬ್ಬದಲ್ಲಿ ಈ ಸಾಂಪ್ರದಾಯಕ ಸಿಖ್ ಧಾರ್ಮಿಕ ಯೋಧ 325 ಮೀಟರ್ ಉದ್ದದ ಬಟ್ಟೆಯ ಮುಂಡಾಸಿನಲ್ಲಿ ಮುಳುಗೆದ್ದ. ಈ ಭಾರ ಹೊತ್ತು ಕುದುರೆಯ ಮೇಲೆ ಕೂತು ನಕಲಿ ಯುದ್ಧದ ಪ್ರದರ್ಶನ ಬೇರೆ ನೀಡಿದನಂತೆ. ಪಾಪ ಕುದುರೆ!





ಚೀನಾದ ಶೆಂಗ್ಜಿ ಕೌಂಟಿಯಲ್ಲಿ ಗುಡ್ಡದ ಮಧ್ಯದಲ್ಲಿರುವ ಶಾಲೆಗೆ ಈ ಮಕ್ಕಳು ನಿತ್ಯ ಕಾಲ್ನಡಿಗೆಯಲ್ಲಿ ಹೋಗಿ ಬಂದು ಮಾಡುತ್ತಾರಂತೆ. 40 ವರ್ಷಗಳ ಹಿಂದೆ ಗುಡ್ಡವನ್ನು ಕೆತ್ತಿ ಮಾಡಿದ ಈ ಅಂಚಿನಲ್ಲಿ ಗುಡ್ಡದ ಕೆಳಭಾಗದಲ್ಲಿರುವ ಜೆಂಗುವಾನ್ ಹಳ್ಳಿಯ ಮಕ್ಕಳು ಸಾಗುವುದು ಶಾಲೆಯ ಮುಖ್ಯೋಪಾಧ್ಯಾಯರ ಮಾರ್ಗದರ್ಶನದಲ್ಲಿ. ಇಲ್ಲಿ ಸಲ್ಲುವವರು ಎಲ್ಲಿಯೂ ಸಲ್ಲುವರು ಎಂಬುದನ್ನು ಚೀನಾ ಎಳವೆಯಲ್ಲೇ ಪ್ರಾತ್ಯಕ್ಷಿಕೆ ಮಾಡಿ ತೋರಿಸುವಂತಿದೆ.

ತೂಕಕ್ಕೆ ತಕ್ಕಂತೆ ಕಾಸು... ವಿಮಾನದಲ್ಲಿ ಪ್ರಯಾಣ ಮಾಡುವವರಿಗೆ ತೂಕಕ್ಕೆ ತಕ್ಕಂತೆ ಟಿಕೆಟ್ ದರ ವಿಧಿಸಿದರೆ ಹೇಗೆ? ನಾರ್ವೆಯ ಪ್ರಾಧ್ಯಾಪಕರೊಬ್ಬರು ಈ ಅಮೂಲ್ಯ ಸಲಹೆ ಮುಂದಿಟ್ಟಿದ್ದಾರೆ. ಡಾ.ಭರತ್ ಭಟ್ಟ ಅವರ ಪ್ರಕಾರ, ಇದರಿಂದ ವಿಮಾನ ಇಂಧನ ಖರ್ಚಿನಲ್ಲಿ ಉಳಿತಾಯ ಮಾಡಬಹುದಂತೆ. ನಿರ್ದಿಷ್ಟ ತೂಕ ಇಟ್ಟುಕೊಂಡು ಅದಕ್ಕಿಂತ ಜಾಸ್ತಿ ಇದ್ದರೆ ಹೆಚ್ಚು ದರ, ಕಡಿಮೆ ಇದ್ದರೆ ಕಡಿಮೆ ದರ ವಿಧಿಸುವುದು. ಈ ಸಲಹೆ ಪ್ರಕಟವಾದ ನಾರ್ವೆಯ 'ಜರ್ನಲ್ ಆಫ್ ರೆವೆನ್ಯೂ ಆ್ಯಂಡ್ ಪ್ರೈಸಿಂಗ್ ಮ್ಯಾನೇಜ್‌ಮೆಂಟ್' ಸಂಪಾದಕರು ಇದನ್ನು ಗಂಭೀರವಾಗಿ ತೆಗೆದುಕೊಂಡು ಸರ್ಕಾರಕ್ಕೆ ಪ್ರಸ್ತಾವ ಕಳಿಸಲಿದ್ದಾರಂತೆ. ಸಾಮಾನು- ಸರಂಜಾಮು ಸಾಗಣೆ ವೆಚ್ಚವನ್ನು ತೂಕದ ಮೇಲೆ ನಿರ್ಧರಿಸಲಾಗುತ್ತದೆ. ಮನುಷ್ಯರಿಗೂ ಅವರ ವಜನ್ ಅನ್ನು ಯಾಕೆ ಪರಿಗಣಿಸಬಾರದು?

ಕೆನಡಾದ ವ್ಯಕ್ತಿ ಬಿಲ್ಲಿ ತುರಿಕೆ ಎಂದು ಬೆನ್ನು ತುರಿಸಿಕೊಳ್ಳುತ್ತಿದ್ದ. ಕೈಗೆ ಲೋಹದಂತಹ ವಸ್ತು ಸ್ಪರ್ಶಿಸಿದಂತಾಯ್ತು. ಎಕ್ಸ್‌ರೇ ಮಾಡಿಸಿದರೆ 2.7 ಇಂಚು ಉದ್ದದ ಹಿಡಿಕೆಯಿಲ್ಲದ ಉಕ್ಕಿನ ಚಾಕು ಇತ್ತಂತೆ. ಮೂರು ವರ್ಷಗಳ ಹಿಂದೆ ಹೊಡೆದಾಟದಲ್ಲಿ ಗಾಯವಾದಾಗ ಹೊಲಿಗೆ ಹಾಕಿದ್ದಂತೆ. ಅದು ಹೊಡೆದಾಟದಲ್ಲಿ ಸೇರಿಕೊಂಡಿದ್ದ ಚಾಕುವೋ ಅಥವಾ ವೈದ್ಯರು ಮರೆತು ಬಿಟ್ಟಿದ್ದ ಚಾಕುವೋ? ಇಷ್ಟು ದಿನ ತುರಿಕೆಯ ಹಿಂದೆ ಬಿದ್ದಿದ್ದ ಬಿಲ್ಲಿ ಈಗ ಚಾಕುವಿನ ರಹಸ್ಯದ ಹಿಂದೆ ಬಿದ್ದಿದ್ದಾನೆ. ಇನ್ಮೇಲೆ ತುರಿಕೆಯಾದರೆ ಹುಷಾರಾಗಿ ತುರಿಸಿಕೊಳ್ಳಿ. ಚಾಕುವಿನ ತುದಿಯೋ, ಬ್ಲೇಡಿನ ಅಂಚೋ ಕೈಗೆ ಚುಚ್ಚಬಾರದಲ್ಲ.



ಮಡಗಾಸ್ಕರ್‌ನಲ್ಲಿ 17ನೇ ಶತಮಾನಕ್ಕೂ ಮುಂಚೆ ಇದ್ದ ಎಲೆಫಂಟ್ ಬರ್ಡ್‌ನ ಮೊಟ್ಟೆ. 21 ಸೆಂ.ಮೀ. ವ್ಯಾಸ ಹಾಗೂ 30 ಸೆಂ.ಮೀ. ಉದ್ದದ ಭಾರಿ ಗಾತ್ರದ ಮೊಟ್ಟೆ ನೋಡಿಯೇ ಪಕ್ಷಿಯ ದೈತ್ಯಾಕಾರ ದೇಹವನ್ನು ಊಹಿಸಬಹುದು. ಲಂಡನ್ನಿನಲ್ಲಿ ಕ್ರಿಸ್ಟಿ ಹರಾಜು ಸಂಸ್ಥೆ ಇದನ್ನು ಹರಾಜು ಹಾಕಲು ಹೊರಟಿದ್ದು 45 ಸಾವಿರ ಡಾಲರ್ ನಿರೀಕ್ಷಿಸಿದೆಯಂತೆ. ಖರೀದಿಸಿದವರು ಅದೇನು ಮಾಡುತ್ತಾರೋ, ಆಮ್ಲೆಟ್ ಮಾಡಲಂತೂ ಸಾಧ್ಯವಿಲ್ಲ.